ನನಗೆ ಗೊತ್ತಿದೆ – ನೀವು ಹೇಳಿರುವುದೆಲ್ಲ ನಿಮ್ಮ ನೋವಿನ ಒಂದಂಶ ಮಾತ್ರವೆಂದು. ಇದರಿಂದಲೇ ನಿಮಗಾದ ಅಪಾರ ದುಃಖ ಊಹಿಸಬಲ್ಲೆ. ಆದರೆ ನನ್ನಲ್ಲಿ ವಿಶ್ವಾಸವಿಡಿ. ಏನನ್ನೂ ಬಯಸದೆ ತಂದೆಯ, ಮಗನ ಪ್ರೀತಿ ನಾನು ಕೊಡಬಲ್ಲೆ. ಬನ್ನಿ, ಬೆಟ್ಟವಿಳಿದು ಹೋಗೋಣ. ಈ ಬಂಡೆಯ ಅಂಚಲ್ಲಿ ನೋವೆಲ್ಲ ಮರೆತು ಬಿಡಿ. ನಾಳೆಯಿಂದ ಹೊಸಬದುಕಿನ ಸಾಧ್ಯತೆಗಳ ಹುಡುಕುತ್ತ ಹೊರಡಿ. ಊರುಗೋಲಾಗಿ ನಾನಿರುವೆ. ನೀವು ಚಿಕ್ಕ ಮಗುವಿನಂತೆ ಸುನಯನ. ಮಗು ಅರಿಯದೆ ಎಡವಿದಾಗ ಪಕ್ಕದಲ್ಲಿರುವವರು ಕೈನೀಡಿ ಎಬ್ಬಿಸುವಂತೆ ಒಬ್ಬರಿಗೊಬ್ಬರು ಕೈನೀಡಿ ನಡೆಯೋಣ. ನಮ್ಮನ್ನು ಅಮ್ಮ ನೋಡಿಕೊಳ್ಳುತ್ತಾಳೆ. ನಾವೆಲ್ಲ ಒಬ್ಬರಿಗೊಬ್ಬರು ಎನ್ನುವ ಹಾಗಿರೋಣ.

ಹೇಳಿ ಸುನಯನ, ನಿಮಗೆ ಸಮಾಧಾನವಾಯಿತೆ? ನಿಮ್ಮೊಂದಿಗಿರುವಷ್ಟು ಕಾಲ ಸಾರ್ಥಕವಾಗಿ ಕಳೆಯುವ ಅವಕಾಶ ನನಗಿದೆಯೇ? ನಿಮ್ಮ ನೆಮ್ಮದಿ–ಸಹನೆ ನನಗೆ ಆಸರೆಯಾಗುತ್ತದೆ. ಆಗಲಿ.

ಹೇಳಿ ಸುನಯನ, ನೀವೀಗ ಹೇಗಿದ್ದೀರಿ? ಕತ್ತಲಾಗುತ್ತಿದೆ. ಬೆಟ್ಟವಿಳಿಯೋಣವೆ?

★★★

ಸುನಯನ – ಚೈತ್ರ ಜಿಂಕೆಗಳಂತೆ ಮೆಟ್ಟಿಲಿಳಿದು ಬರುವುದನ್ನು ಮನೆಯ ಬಾಗಿಲ ಬಳಿ ನಿಂತ ಮುದುಕಿ ನಗುತ್ತ ನೋಡಿದಳು. ಅವರಿಬ್ಬರು ಸಂಜೆಯೋ – ಬೆಳಗೋ ಅರಿಯದ ಕೆಂಬಣ್ಣದಲ್ಲಿ ದೇವಲೋಕದವರು ಎಂದು ಅನ್ನಿಸಿತು.

ಒಂದು ಕ್ಷಣ ಸುನಯನಳ ಕಂಕುಳಲ್ಲಿ ಮಗುವೊಂದು ಮಲಗಿ ನಿದ್ರಿಸುತ್ತಿರುವ ಭ್ರಮೆಯುಂಟಾಗಿ – ಅರೆ! ಅದಕ್ಕೆ ಚಳಿಯಾಗುತ್ತಿರಬಹುದು. ಪೆಟ್ಟಿಗೆಯಲ್ಲಿನ ಕಾಲುಚೀಲ, ಕುಂಚಿಗೆ, ಸ್ವೆಟರ್ ಹೊರತೆಗೆಯಬೇಕು ಅನ್ನಿಸಿತು. ಅವರು ಇನ್ನೆರಡು ಮೆಟ್ಟಿಲು ಇಳಿದು ಮುಗಿಸುವುದರಲ್ಲಿ ಒಳಗೋಡಿ ತಟ್ಟೆಯಲ್ಲಿ ಸಂಜೆಬಣ್ಣದ ಕುಂಕುಮದ ನೀರನ್ನು ತಂದಳು. ಅವರಿಬ್ಬರೂ ಮೇಲಿನಿಂದ ಕೈಬೀಸಿದಾಗ ಇವಳೂ ಕೈಬೀಸಿ, ಕಾದಳು.

★★★

ಕೊನೆಯ ಹಾಗೂ ಮೊದಲ ಮೆಟ್ಟಿಲ ದಾಟಿದರೆ ಚೈತ್ರನ ಮನೆ. ನಾನು ಮೂರು ಮೆಟ್ಟಲು ಒಮ್ಮೆಗೆ ಚಂಗನೆ ಜಿಗಿದು ಮೊದಲ ಮೆಟ್ಟಲಲ್ಲಿ ನಿಂತು...

ಎಲ್ಲಿ ಚೈತ್ರ ನಿನ್ನ ಕೈಗಳನಿತ್ತ ತಾ – ಎಂದೆ. ಚೈತ್ರ ಕೈ ನೀಡಿದ.

ಹೂವಿನ ಹೊಟ್ಟೆಯ ಹಾಗೆ ಎಷ್ಟು ಬೆಚ್ಚಗಿದ್ದವು. ಅವನೊಮ್ಮೆ ನಕ್ಕ, ಮಲ್ಲಿಗೆ ಹೂರಾಶಿ.

ನಾನಾ ಹೂವನ್ನು ಬಳಿದು ಮೂಗಿಗಿಟ್ಟುಕೊಂಡೆ. ಕೈಯಲ್ಲಿ ಕುಂಕುಮದಾರತಿಯ ತಟ್ಟೆ ಹಿಡಿದ ಅಮ್ಮನನ್ನು ನೋಡುತ್ತ.

ಬದುಕಿಗಾಗಿ, ಹೊಸದಾಗಿ ಹುಟ್ಟುವ ಈ ಮಗುವಿಗೆ ಏನು ಕೊಡುತ್ತೀಯ?

ಚೈತ್ರ ಕೇಳಿದ;

ಸುನಯನ. ನನ್ನನ್ನೇ!

'ನಾನು ನಿನ್ನ ಜೀವದ ಕುಡಿ, ಹೊಸ ಋತುವಿನ ಗೆಳೆಯ. ಸಹಯಾತ್ರಿ, ಸರ್ವದಮನ!'

(ಮುಗಿಯಿತು)